ಓ.ಎಸ್.ನಂ.11/2018
ಪಿ.ಡಬ್ಲ್ಯೂ-01

<u>ಸಾಕ್ಷಿಯನ್ನು ದಿಃ **02.01.2024** ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಎಂ.ಜಿ.ವಕೀಲರಿಂದ.</u>

ನಾನು ಎಸಿ.ಎಸ್.ಎಲ್.ಸಿ ವರಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಜನ್ಮ ದಿನಾಂಕ 20.07.1980 ಆಗಿರುತ್ತದ್ಧೆ . ವಾದಿ 3 ಅವರು ಪಿ.ಯು ,ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದು ಅವರ ಜನ್ಮ ದಿನಾಂಕ ನನಗೆ ಗೊತ್ತಿಲ್ಲ. ನನಗೂ 3 ನೇ ವಾದಿಗೂ 6-7 ವರ್ಷ ಅಂತರ ಇರುತ್ತದೆ . ದಾವೆಯನ್ನು ನನ್ನ ತಂದೆಯ ಆಸ್ತಿಯನ್ನು ಕೋರಿ ದಾವೆಯನ್ನು ದಾಖಲು ಮಾಡಿರುತ್ತೇನೆ. ದಾವೆಯನ್ನು ಪ್ರತಿವಾದಿ 1-3 ಅವರ ವಿರುದ್ಧ ದಾವೆ ದಾಖಲು ಮಾಡಿರುತ್ತೇನೆ. ದಾವೆಯನ್ನು ದಾಖಲು ಮಾಡಲು ಮಾಹಿತಿಯನ್ನು ನಾನು ಮತ್ತು 3 ನೇ ವಾದಿ ನನ್ನ ತಾಯಿಯಿಂದ ತಿಳಿದುಕೂಂಡು ವಕೀಲರಿಗೆ ನೀಡಿರುತ್ತೇವೆ. ಈ ಪ್ರಕರಣದಲ್ಲಿ ಪ್ರತಿವಾದಿಗಳು ಸಲ್ಲಿಸಿದ ಪ್ರತಿವಾದಿ ಪತ್ರದ ಅಂಶಗಳನ್ನು ನಾನು ತಿಳಿದುಕೊಂಡಿರುತ್ತೇನೆ. ಈ ಪ್ರಕರಣದಲ್ಲಿ ಶಾಲಾ ದಾಖಲಾತಿ ಆಧಾರ ಕಾರ್ಡ್ ಮತ್ತು ಪಡಿತರ ಚೀಟಿಯ ಜರಾಕ್ಸ್ ಪ್ರತಿಯನ್ನು ಹಾಜರುಪಡಿಸಿದ್ದು ಮೂಲ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ.

ನಾನು ಮತ್ತು 3 ನೇ ವಾದಿ ಪ್ರಾಥಮಿಕ ಶಿಕ್ಷಣವನ್ನು ತರಿಕೆರೆಯಲ್ಕಿ ಮುಗಿಸಿದ್ದು ಪ್ರೌಢ ಶಿಕ್ಷಣವನ್ನು ಗವಿ ಮಠದಲ್ಲಿ ಮುಗಿಸಿರುತ್ತೇನೆ. ನನ್ನ ಮತ್ತು ಇತರ ವಾದಿಗಳ ಖಾಯಂ ವಿಳಾಸ ತರಿಕೆರೆ ಆಗಿರುತ್ತದೆ. 1-2 ನೇ ಪ್ರತಿವಾದಿಗಳ ವಿಳಾಸ ಟಿ. ಹೊಸಹಳ್ಳಿ ಆಗಿರುತ್ತದೆ. ತರಿಕೆರೆಗೂ ಹೊಸಹಳ್ಳಿಗೂ 1 ವರೆ ಯಿಂದ 2 ಕೀ ಮಿ ಅಂತರ ಇರುತ್ತದೆ . ನೀವು ಮತ್ತು 3 ನೇ ವಾದಿ ತಿಮ್ಮಪ್ಪ ಅವರು ಮಕ್ಕಳು ಹಾಗೂ 1 ನೇ ವಾದಿ ತಿಮ್ಮಪ್ಪ ಅವರ ಹೆಂಡತಿಯಂದು ತೋರಿಸಲು ಏನು ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಜರಾಕ್ಸ ಪ್ರತಿಗಳನ್ನು ಹಾಜರುಪಡಿಸಿದ್ದೇನೆ ಎಂದು ಹೇಳುತ್ತಾರೆ. ನಾನು ಹೇಳಿದಂತೆ ಈ ಪ್ರಕರಣದಲ್ಲಿ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

3 ನೇ ಪ್ರತಿವಾದಿ ಕದರಾಪುರ ಗ್ರಾಮದಲ್ಲಿ ವಾಸವಿದ್ದಾರೆ. 3 ನೇ ಪ್ರತಿವಾದಿ ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದಾರೆ. ಅವರ ಗಂಡನ ಹೆಸರು ತಿಮ್ಮಪ್ಪ ಆಗಿರುತ್ತದೆ. 3 ನೇ ಪ್ರತಿವಾದಿ ಮತ್ತು ತಿಮ್ಮಪ್ಪ ಅವರಿಗೆ ಇಬ್ಬರೂ ಗಂಡು ಮಕ್ಕಳು 1 ಹೆಣ್ಣು ಮಗು ಇರುತ್ತದೆ. ಅವರುಗಳೆಂದರೆ ಕೃಷ್ಣೇಗೌಡ, ಸಾವಿತ್ರಮ್ಮ ಮತ್ತು ರವಿಕುಮಾರ ಆಗಿರುತ್ತಾರೆ. ಕೃಷ್ಣೇಗೌಡ ಅವರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ಅವರ ಹೆಂಡತಿ ಮಕ್ಕಳನ್ನು ಮಾಡಿದ್ದೇನೆ

ಎಂದು ಹೇಳುತ್ತಾರೆ. ಅವರ ಹೆಂಡತಿ ಮಕ್ಕಳ ಹೆಸರು ನನಗೆ ಗೊತ್ತಿಲ್ಲ. ಕೃಷ್ಣೇಗೌಡ ಅವರು ಮರಣ ಹೊಂದಿದರ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ವಾದಿ ಪತ್ರದಲ್ಲಿ ದಿವಂಗತ ಕೃಷ್ಣೆಗೌಡ ಎಂದು ಹಾಕಿರುವುದಿಲ್ಲ ತಪ್ಪು ಇರುತ್ತದೆ ಎಂದೆರ ಸರಿ. 3 ನೇ ಪ್ರತಿವಾದಿಗೆ ಕೃಷ್ಣೇಗೌಡ ಸಾವಿತ್ರಮ್ಮ ಮತ್ತು ವೆಂಕಟೇಶ ಎಂಬ ಮಕ್ಕಳಿದ್ದು ರವಿಕುಮಾರ ಅವರ ಮಕ್ಕಳಾಗಿರುವುದಿಲ್ಲ ಎಂದರೆ ಸರಿ. ವೆಂಕಟೇಶ್ ಅವರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಕಾರಣ ಅವರು ಮರಣ ಹೊಂದಿರುತ್ತಾರೆ. ವೆಂಕಟೇಶ್ ಅವರಿಗೆ ವಿವಾಹ ಆಗಿರಲಿಲ್ಲ ಮತ್ತು ಮಕ್ಕಳು ಇರಲಿಲ್ಲ.

ನಾನು ನ್ಯಾಯಾಲಯದ ಮುಂದೆ ನಿ.ಪಿ 2 ರನ್ನು ಹಾಜರುಪಡಿಸಿದ್ದು ಅದರಲ್ಲಿ ಜಯಮ್ಮ ಅವರ ಮಕ್ಕಳನ್ನು ತೋರಿಸಿಲ್ಲ ಎಂದರೆ ಸರಿ. ನನ್ನ ತಾಯಿಯ ಹೇಳಿಕೆ ಮೇರಿಗೆ ನಿ.ಪಿ 2 ಅನ್ನು ತಯಾರು ಮಾಡಿರುತ್ತೇವೆ. ನನ್ನ ತಂದೆಯ ತಾತನ ಹೆಸರು ಬ್ಯಾಟೇಗೌಡ ಆಗಿರುತ್ತದೆ. ಬ್ಯಾಟೇಗೌಡ ಅವರ ಹೆಂಡತಿ ಹೆಸರು ಗಿರಿಯಮ್ಮ ಆಗಿದ್ದು ಅವರಿಗೆ 3 ಜನ ಗಂಡು ಮಕ್ಕಳು 5 ಜನ ಹೆಣ್ಣು ಮಕ್ಕಳಿರುತ್ತಾರೆ. ಅವರುಗಳೆಂದರೆ ಬೆಟ್ಟಸ್ವಾಮಿ, ಬೆಟ್ಟಯ್ಯ ಮತ್ತು ಪಾಪಯ್ಯ ಆಗಿರುತ್ತಾರೆ. ಹೆಣ್ಣು ಮಕ್ಕಳ ಹೆಸರು ನನಗೆ ಗೊತ್ತಿಲ್ಲ. ನಿ.ಪಿ 2 ರಲ್ಲಿ ಹೆಣ್ಣು ಮಕ್ಕಳ ಹೆಸರನ್ನು ತೋರಿಸಿಲ್ಲ ಎಂದರೆ ಸರಿ. ನಿ.ಪಿ 2 ರಲ್ಲಿ ಬ್ಯಾಟೇಗೌಡ ಅವರಿಗೆ ತಿಮ್ಮಯ್ಯ ಬೆಟ್ಟಯ್ಯ ಮತ್ತು ಬೆಟ್ಟಸ್ವಾಮಿ ಎನ್ನುವ ಮಕ್ಕಳಿರುವುದಾಗಿ ತೋರಿಸಿದ್ದು ಪಾಪಯ್ಯ ಎನ್ನುವ ಮಗ ಇರುವುದಾಗಿ ತೋರಿಸಿಲ್ಲ ಎಂದರೆ ಸಾಕ್ಷಿ ತಿಮ್ಮಯ್ಯ ಅಲಯಾಸ್ ಪಾಪಯ್ಯ ಎಂದು ಹೇಳುತ್ತಾರೆ.

ಬ್ಯಾಟೇಗೌಡ ಅವರ ಹೆಂಡತಿ ಹೆಸರು ಕೆಂಪಹೊನ್ನಮ್ಮ ಆಗಿದ್ದು ಅವರು ಗಿರಿಯಮ್ಮ ಆಗಿರುವುದಿಲ್ಲ ಎಂದರೆ ಸಾಕ್ಷಿ ಕೆಂಪಹೊನ್ನಮ್ಮ (ಗಿರಿಯಮ್ಮ) ಎಂದು ಇರುತ್ತದೆ ಎಂದು ಹೇಳುತ್ತಾರೆ. ಬೆಟ್ಟೆಗೌಡ ಅವರಿಗೆ ದೊಡ್ಡಮ್ಮ, ತಮ್ಮಮ್ಮ, ಚಿಕ್ಕಮ್ಮ ಮತ್ತು ಲಕ್ಷಮ್ಮ ಎನ್ನು ವ 4 ಜನ ಹೆಣ್ಣು ಮಕ್ಕಳು ಇರುತ್ತಾರೆ ಎಂದರೆ ಸರಿ. ಅವರು ಗಂಡು ಮಕ್ಕಳ ಹೆಸರು ತಿಮ್ಮಯ್ಯ ಉರಫ್ ಪಾಪಯ್ಯ ಬೆಟ್ಟಯ್ಯ ಮತ್ತು ಬೆಟ್ಟಸ್ವಾಮಯ್ಯ ಆಗಿರುತ್ತದೆ ಎಂದರೆ ಸರಿ.

ತಿಮ್ಮಯ್ಯ @ ಪಾಪಯ್ಯ ಅವರ ಹೆಂಡತಿ ಹೆಸರು ಮಾಹಾಂತಮ್ಮ ಆಗಿರುತ್ತದೆ. ಅವರಿಗೆ ಇಬ್ಬರೂ ಮಕ್ಕಳು ಇದ್ದು ಅವರು ಹೆಸರು ಮತ್ತು ಎಷ್ಟು ಜನ ಗಂಡು ಮಕ್ಕಳು ಎಂದು ನನಗೆ ಗೊತ್ತಿಲ್ಲ. ಅವರಿಗೆ 3 ಜನ ಹೆಣ್ಣು ಮಕ್ಕಳು ಗಂಗಮ್ಮಾ ತಿಮ್ಮಮ್ಮ ಮತ್ತು ಜಯಮ್ಮಾ ಮತ್ತು 3 ಜನ ಗಂಡು ಮಕ್ಕಳು ಮರಿಯಪ್ಪ, ನಾಗಣ್ಣ ಮತ್ತು ರಾಮಕೃಷ್ಣ ಆಗಿರುತ್ತಾರೆ ಎಂದರೆ ಸರಿ. ಬೆಟ್ಟಗೌಡರ 2 ನೇ ಮಗ ಬೆಟ್ಟಯ್ಯ ಅವರಿಗೆ ಹೊನ್ನಮ್ಮ ಎನ್ನುವ ಹೆಂಡತಿ ಇದ್ದು ತಿಮ್ಮಪ್ಪ , ಮರಿಯಪ್ಪ ಮತ್ತು ಶ್ರೀನಿವಾಸ ಎನ್ನುವ ಗಂಡು ಮಕ್ಕಳು ಇರುತ್ತಾರೆ ಎಂದರೆ ಸರಿ.

ಮರಿಯಪ್ಪಅವರನ್ನು ಕುಳ್ಳಯ್ಯ ಎಂತಲೂ ಶ್ರೀನಿವಾಸ ಅವರನ್ನು ಶಿನಪ್ಪ ಎಂದು ಕರೆಯುತ್ತಾರೆ ಎಂದರೆ ಸರಿ.

ಬೆಟ್ಟಸ್ವಾಮಯ್ಯ ಅವರ ಹೆಂಡತಿ ಹೆಸರು ಕರಿಯಮ್ಮ ಆಗಿದ್ದು ಅವರಿಗೆ 4 ಜನ ಮಕ್ಕವಿದ್ದು ಅವರ ಹೆಸರು ಲಕ್ಷಿದೇವಮ್ಮಾ, ಧನಲಕ್ಷಮ್ಮ, ಬಸವರಾಜು ಮತ್ತು ನಾಗಮ್ಮ ಎನ್ನುವ ಮಕ್ಕಳು ಇರುತ್ತಾರೆ ಎಂದರೆ ಸರಿ. ಬೆಟ್ಟಸ್ವಾಮಯ್ಯ ಮತ್ತು ತಿಮ್ಮಯ್ಯ ಉರಫ್ ಪಾಪಯ್ಯ ಅವರ ಮಕ್ಕಳನ್ನು ಈ ಪ್ರಕರಣದಲ್ಲಿ ಪಕ್ಷಗಾರನ್ನಾಗಿ ಮಾಡಿಲ್ಲ ಎಂದರೆ ಸರಿ. ನಿ.ಪಿ 2 ರಲ್ಲಿ ಬೆಟ್ಟಸ್ವಾಮಯ್ಯ ಮತ್ತು ತಿಮ್ಮಯ್ಯ ಉರಫ್ ಪಾಪಯ್ಯ ಹೆಂಡತಿ ಮಕ್ಕಳನ್ನು ತೋರಿಸಿಲ್ಲ ಎಂದರೆ ಸರಿ. ಈಗ ಸಾಕ್ಷಿಗೆ 1 ವಂಶವೃಕ್ಷ ವನ್ನು ತೋರಿಸಿ ಕೇಳಿದಾಗ ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಕಾರಣ ಸದರಿ ದಾಖಲೆಯನ್ನು ನಿ.ಡಿ 1 ಎಂದು ಗುರುತಿಸಲಾಯಿತು. ಉಳಿದವರ ಹೆಸರುಗಳನ್ನು ಬಿಟ್ಟು ನಿ.ಪಿ 2 ದಾಖಲೆಯನ್ನು ಸೃಷ್ಟಿಮಾಡಿರುತ್ತೇನೆ ಎಂದರೆ ಸರಿಯಲ್ಲ.

1 ನೇ ವಾದಿಯ ಮದುವೆ ತಿಮ್ಮಪ್ಪ ಅವರೊಂದಿಗೆ ಯಾವಾಗ ಆಗಿರುತ್ತದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ ಮತ್ತು ಮದುವೆ ದಿನಾಂಕ ಸಹ ನನಗೆ ಗೊತ್ತಿಲ್ಲ. ಬೆಟ್ಟಯ್ಯ ಅವರ ಮಗ ತಿಮ್ಮಪ್ಪ ಅವರಿಗೆ 3 ನೇ ಪ್ರತಿವಾದಿ ಹೆಂಡತಿಯಾಗಿದ್ದು 1 ನೇ ವಾದಿ ಅವರ ಹೆಂಡತಿ ಆಗಿರುವುದಿಲ್ಲ ಮತ್ತು ನಾನು ಹಾಗೂ 3 ನೇ ವಾದಿ ಅವರ ಮಕ್ಕಳಾಗಿರುವುದಿಲ್ಲ ಎಂದೆರ ಸಾಕ್ಷಿ 3 ನೇ ಪ್ರತಿವಾದಿ 1 ನೇ ಹೆಂಡತಿ ಆಗಿದ್ದು ವಾದಿ 2 ನೇ ಹೆಂಡತಿ ಆಗಿರುತ್ತಾರೆ ಎಂದು ಹೇಳುತ್ತಾರೆ. ತಿಮ್ಮಪ್ಪ ಅವರಿಗೆ 3 ನೇ ಪ್ರತಿವಾದಿ ಮಾತ್ರ ಕಾನೂನು ಬದ್ಧ ಗ ಹೆಂಡತಿ ಆಗಿದ್ದು 1 ನೇ ವಾದಿ ಅವರ ಹೆಂಡತಿ ಆಗಿರುವುದಿಲ್ಲ ನಾವು ಈ ಕೇಸಗೊಸ್ಕರ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಮತ್ತು ಇತರ ವಾದಿಗಳು ತಿಮ್ಮಪ್ಪ ಅವರಿಗೆ ಸಂಬಂಧ ವಿಲ್ಲದೇ ಇರುವ ಕಾರಣ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಬ್ಯಾಟೆಗೌಡ ಮತ್ತು ಕೆಂಪಹೊನ್ನಮ್ಮ ಅವರ ಮಕ್ಕಳ ನಡುವೆ ಭಾಗ ಆಗಿರುವುದಾಗಿ ತೋರಿಸಲು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. 3 ನೇ ಪ್ರತಿವಾದಿಯ ಗಂಡ ತಿಮ್ಮಪ್ಪ ಅವರು ಕದರಾಪುರ ಗ್ರಾಮದಲ್ಲಿ 1996 ರಲ್ಲಿ ಮರಣ ಹೊಂದಿರುತ್ತಾರೆ. ತಿಮ್ಮಪ್ಪ ಅವರು ಕದರಾಪುರದಲ್ಲಿ ಯಾವ ಕಾರಣಕ್ಕಾಗಿ ವಾಸ ಮಾಡುತ್ತಿದ್ದರು ನನಗೆ ಗೊತ್ತಿಲ್ಲ. ಕದರಾಪುರ ಗ್ರಾಮಕ್ಕೂ ಮತ್ತು ಟಿ. ಹೊಸಹಳ್ಳಿ ಗ್ರಾಮಕ್ಕೂ 4 ಕೀ. ಮಿ ಅಂತರ ಇರುತ್ತದೆ.

ನನ್ನ ಖಾಯಂ ವಾಸ ತರಿಕೆರೆ ಆಗಿರುತ್ತದೆ. ಹಬ್ಬ ಹರಿದಿನಗಳಲ್ಲಿ ಮಾತ್ರ ಟಿ. ಹೊಸಹಳ್ಳಿಗೆ ಹೋಗಿ ಬಂದು ಮಾಡುತ್ತೇನೆ. ದಾವಾ ಸ್ವತ್ತುಗಳನ್ನು ಟಿ. ಹೊಸಹಳ್ಳಿ ಗ್ರಾಮದಲ್ಲಿರುತ್ತವೆ. ಈ

ದಾವೆಯಲ್ಲಿ 8-10 ಐಟಂ ಗಳ ಆಸ್ತಿಗಳು ತೋರಿಸಿರುತ್ತೇವೆ. ಎಲ್ಲ ಸ್ವತ್ತುಗಳ ಸರ್ವೆ ನಂ ವಿಸ್ತೀರ್ಣ ಮತ್ತು ಚಕ್ಕುಬಂದಿಗಳು ಹೇಳಲು ಬರುವುದಿಲ್ಲ. ಯಾವ ದಾಖಲಾತಿ ಆಧಾರದ ಮೇರೆಗೆ ದಾವ ಪತ್ರದಲ್ಲಿ ಚಕ್ಕುಬಂದಿಯನ್ನು ತೋರಿಸಿರುತ್ತೀರಿ ಎಂದರೆ ಸಾಕ್ಷಿ ಅಕ್ಕಪಕ್ಕದವರನ್ನು ವಿಚಾರಿಸಿ ತೋರಿಸಿರುತ್ತೇವೆ ಎಂದು ಹೇಳುತ್ತಾರೆ. ವಾದ ಪತ್ರದಲ್ಲಿ 3 ನೇ ಪ್ರತಿವಾದಿಗೆ ಮಕ್ಕಳಿರುವುದಿಲ್ಲ ಮತ್ತು ಅವರು ಎಲ್ಲಿ ವಾಸ ವಿದ್ದಾರೆ ಎಂದು ಗೊತ್ತಿಲ್ಲ ವೆಂದು ಬರಸಿದ್ದು ತಪ್ಪು ಇರುತ್ತದೆ ಎಂದೆರ ಸರಿ.

ಪ್ರತಿವಾದಿ 1 ಮತ್ತು 2 ಪ್ರತಿವಾದಿ ಪತ್ರ ಸಲ್ಲಿಸಿದ ಬಳಿಕ 3- 7 ನೇ ಪ್ರತಿವಾದಿಗಳನ್ನು ಈ ಪ್ರಕರಣದಲ್ಲಿ ಸೇರಿಸಿರುತ್ತೇವೆ ಎಂದೆರ ಸರಿ. ದಾವಾ ಸ್ವತ್ತುಗಳನ್ನು ನಾನು ಖುದ್ದಾಗಿ ನೋಡಿರುವುದಿಲ್ಲ. 3-7 ನೇ ಪ್ರತಿವಾದಿಗು ಈ ದಾವೆಯಲ್ಲಿ ಪ್ರತಿವಾದ ಪತ್ರ ಸಲ್ಲಿಸಿದ ಬಳಿಕ ಅವರ ಪ್ರತಿವಾದ ಪತ್ರದಲ್ಲಿ ತೋರಿಸಿರುವ ದಾಖಲೆಗಳನ್ನು ನಾನು ಪರಿಶೀಲನೆ ಮಾಡಿರುತ್ತೇನೆ. ಬ್ಯಾಟೇಗೌಡರ ಆಸ್ತಿಗಳನ್ನು ಅವರ 3 ಜನ ಮಕ್ಕಳು ಹಿಂದೆಯೇ ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿ. ಬ್ಯಾಟೇಗೌಡರ ಮಗ ತಿಮ್ಮಯ್ಯ ಅವರು ಪಾಪಯ್ಯ ಅವರ ಭಾಗಕ್ಕೆ ಬಂದ ಆಸ್ತಿಗಳನ್ನು ಖಾತೆ ಬದಲಾವಣೆ ಮಾಡಿಕೊಂಡು ಅವರು ಸ್ವಾಧೀನದಲ್ಲಿದ್ದರು ಎಂದರೆ ಸರಿ.

ತಿಮ್ಮಯ್ಯನ ಹೆಂಡತಿ ಮಹಾಂತಮ್ಮ ಮತ್ತು ಬೆಟ್ಟಮ್ಮ ಅವರುಗಳು ಸರ್ವೆ ನಂ 41/1 ವಿಸ್ತೀರ್ಣ 12 ಗುಂಟೆ ಜಮೀನು ದಿಃ 12.09.1960 ರಲ್ಲಿ ಬೆಟ್ಟಸ್ವಾಮಿ ಬಿನ್ ಬೆಟ್ಟೆಗೌಡ ಅವರಿಗೆ ಮಾರಾಟ ಮಾಡಿರುತ್ತಾರೆ ಎಂದೆರ ಸರಿ. ಸಾಕ್ಷಿಗೆ ಸದರಿ ಕ್ರಯ ಪತ್ರದ ಮೂಲ ವನ್ನು ತೋರಿಸಿ ಕೇಳಲಾಗಿ ಸದರಿ ದಾಖಲೆಯನ್ನು ಒಪ್ಪಿಕೊಂಡಿದ್ದು ಸದರಿ ದಾಖಲೆಯನ್ನು ನಿ,ಡಿ 2 ಎಂದು ಗುರುತಿಸಲಾಯಿತು. ಬೆಟ್ಟಯ್ಯ ಮತ್ತು ಅವರು ಮಕ್ಕಳು ಬೆಟ್ಟಸ್ವಾಮಯ್ಯ ಅವರಿಗೆ ದಿಃ 17.04.1975 ರಂದು ಸರ್ವೇ ನಂ 41/1 ಎ 20 ಗುಂಟೆ ಮತ್ತು ಸರ್ವೇ ನಂ 88/1 ಎ ನಲ್ಲಿ 20 ಗುಂಟೆ ಜಮೀನನ್ನು ಮಾರಾಟ ಮಾಡಿದ ಮೂಲ ಕ್ರಯ ಪತ್ರವನ್ನು ಸಾಕ್ಷಿಗೆ ತೋರಿಸಿ ಕೇಳಲಾಗಿ ಒಪ್ಪಿಕೊಂಡಿದ್ದು ಸದರಿ ದಾಖಲೆಯನ್ನು ನಿ.ಡಿ 3 ಎಂದು ಗುರುತಿಸಲಾಯಿತು.

ದಿಃ 17.04.1975 ತಿಮ್ಮಯ್ಯ @ ಪಾಪಯ್ಯ ಮತ್ತು ಅವರು ಮಕ್ಕಳು ಟಿ. ಹೊಸಹಳ್ಳಿ ಗ್ರಾಮದ ಸರ್ವೇ ನಂ 41/1 ಬಿ ನಲ್ಲಿ 1 ಎಕರೆ ಮತ್ತು ಸರ್ವೇ ನಂ 88/1 ಬಿ ನಲ್ಲಿ 1 ಎಕರೆ ಜಮೀನನ್ನು ಬೆಟ್ಟಯ್ಯ ಅವರಿಗೆ ಮಾರಾಟ ಮಾಡಿರುತ್ತಾರೆ ಎಂದೆರ ಸರಿ. ಸದರಿ ದಾಖಲೆಯನ್ನು ಸಾಕ್ಷಿಗೆ ತೋರಿಸಿ ಕೇಳಲಾಗಿ ಒಪ್ಪಿಕೊಂಡಿದ್ದು ಅದನ್ನು ನಿ.ಡಿ 4 ಎಂದು ಗುರುತಿಸಲಾಯಿತು. ಮಾರಾಟ ಮಾಡಿದ ಸ್ವತ್ತುಗಳನ್ನು ಹೊರತು ಪಡಿಸಿ ಉಳಿದ ಆಸ್ತಿಗಳನ್ನು ಜಂಟಿಯಾಗಿ ಖಾತೆ

ಮಾಡಿಸಿಕೊಂಡು ಉಳುಮೆ ಮಾಡುತ್ತಿದ್ದರು ಎಂದರೆ ಸರಿ. ಬೆಟ್ಟಯ್ಯ ಮತ್ತು ಬೆಟ್ಟಸ್ವಾಮಯ್ಯ ಅವರ ಮರಣಾನಂತರ ಅವರು ಮಕ್ಕಳುಗಳು ಸದರಿ ಆಸ್ತಿಗಳನ್ನು ಅನುಭವಿಸುತ್ತಿದ್ದರು ಎಂದೆರ ಸರಿ.

ದಿಃ 31.03.1983 ರಲ್ಲಿ ಬೆಟ್ಟಯ್ಯ ಮತ್ತು ಹೊನ್ನಮ್ಮ ಅವರ ಮಗ ತಿಮ್ಮಪ್ಪ ಅವರು ಸರ್ವೇ ನಂ 44/2 ರಲ್ಲಿ 1 ಎಕರೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ದಾಖಲೆಯನ್ನು ನಿ.ಡಿ 5 ಎಂದು ಗುರುತಿಸಲಾಯಿತು. ದಿಃ 18.05.1984 ರಂದು ತಿಮ್ಮಮ್ಮ ಮತ್ತು ಬೆಟ್ಟಯ್ಯ ಅವರು ಮರಿಯಪ್ಪ ಮತ್ತು ಶ್ರೀನಿವಾಸ ಅವರಿಗೆ ಹಕ್ಕು ಖುಲಾಸೆ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ದಾಖಲೆಯನ್ನು ಸಾಕ್ಷಿಗೆ ತೋರಿಸಿ ಕೇಳಲಾಗಿ ಒಪ್ಪಿಕೊಂಡಿದು ಅದನ್ನು ನಿ.ಡಿ 6 ಎಂದು ಗುರುತಿಸಲಾಯಿತು. 3 ನೇ ಪ್ರತಿವಾದಿ ಕದರಾಪುರ ಗ್ರಾಮದ ಕುಂಟೇಗೌಡರ ಮಗಳು ಎಂದರೆ ಸರಿ. ತಿಮ್ಮಪ್ಪ ಅವರು ಹಕ್ಕು ಖಾಲಾಸೆ ಮತ್ತು ಕ್ರಯ ಪತ್ರವನ್ನು ಬರೆದು ಕೊಟ್ಟು ಅವರ ಮಾವನ ಮನೆ ಕದರಾಪುರದಲ್ಲಿ ವಾಸ ಹೊಂದಿದ್ದರು ಎಂದೆರ ಸರಿ. ಹಕ್ಕು ಖುಲಾಸೆ ಮತ್ತು ಕ್ರಯ ಪತ್ರ ಬರೆದು ಕೊಡುವ ಸಮಯದಲ್ಲಿ ತಿಮ್ಮಪ್ಪ ಅವರು ಹಣ ಪಡೆದಿರುತ್ತಾರೆ ಎಂದರೆ ಸರಿ. ಹಕ್ಕು ಖುಲಾಸೆ ಮತ್ತು ಕ್ರಯ ಪತ್ರ ಮಾಡಿಕೊಟ್ಟ ನಂತರ ಅವರ ತಂದೆ ಬೆಟ್ಟಯ್ಯ ಅವರ ಆಸ್ತಿಯಲ್ಲಿ ಇದ್ದಂತಹ ಎಲ್ಲಾ ಹಕ್ಕುಗಳನ್ನು ಕಳೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ತಿಮ್ಮಪ್ಪ ಅವರುಹಕ್ಕು ಖುಲಾಸೆ ಮತ್ತು ಕ್ರಯ ಪತ್ರ ಮಾಡಿಕೊಟ್ಟ ಬಳಿಕ ಟಿ. ಹೊಸಹಳ್ಳಿ ಗ್ರಾಮದಲ್ಲಿ ವಾಸವಿರಲಿಲ್ಲ ಮತ್ತು ಅವರ ತಂದೆಯ ಆಸ್ತಿಯಲ್ಲಿ ಹಕ್ಕು ಇರಲಿಲ್ಲ ಎಂದರೆ ಸರಿ. ದಿಃ 03.11.1996 ರಂದು 3 ನೇ ವಾದಿ ಹಾಗೂ ಅವರ 3 ಜನ ಮಕ್ಕಳನ್ನು ವಾರಸುದಾರರನ್ನಾಗಿ ಬಿಟ್ಟು ತಿಮ್ಮಪ್ಪ ಅವರು ಕದರಾಪುರ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ತಿಮ್ಮಪ್ಪ ಅವರಿಗೆ ಅವರ ತಂದೆಯಿಂದ ಯಾವುದೇ ಆಸ್ತಿ ಬಂದಿರುವುದಿಲ್ಲ ಮತ್ತು ನಾವು ತಿಮ್ಮಪ್ಪ ಅವರ ಹೆಂಡತಿ ಮತ್ತು ಮಕ್ಕಳು ಆಗದೆ ಇರುವ ಕಾರಣ ಆಸ್ತಿಯಲ್ಲಿ ಭಾಗ ಕೇಳುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ

ಕುಣಿಗಲ್.